ನೇತ್ರದಾನ ಶ್ರೇಷ್ಟದಾನ

# ಸಮದೃಷ್ಟಿ ಕ್ಷಮತಾ ವಿಕಾಸ ಮತ್ತು ಅನುಸಂಧಾನ ಮಂಡಲ

# ಸ ಕ್ಷ ಮ

ಕರ್ನಾಟಕ ಕ್ರಮಾಂಕ : MAH/654/2008(n) ಬೆಂಗಳೂರು

## ವಿಶೇಷಚೇತನರ ಕಲ್ಯಾಣಕ್ಕಾಗಿ ಸಮರ್ಪಿತ ರಾಷ್ಟ್ರೀಯ ಸಂಘಟನೆ

ಸಮದೃಷ್ಟಿ ಕ್ಷಮತಾ ವಿಕಾಸ ಮತ್ತು ಅನುಸಂಧಾನ ಮಂಡಲ (ಸಕ್ಷಮ) ವಾಕ್ ಶ್ರವಣ, ದೃಷ್ಟಿ, ಚಲನವಲನ ಇತ್ಯಾದಿ ಶಾರೀರಿಕ ಮತ್ತು ಬೌದ್ಧಿಕ ಸವಾಲುಳ್ಳ ದೇಶ ಬಾಂಧವರ ಸರ್ವಾಂಗೀಣ ವಿಕಾಸಕ್ಕಾಗಿ ಕಾರ್ಯಶೀಲವಾಗಿರುವ ರಾಷ್ಟ್ರೀಯ ಸಂಘಟನೆ.

ಶಾರೀರಿಕ ಮತ್ತು ಬೌದ್ಧಿಕ ಸವಾಲಿನ ಪರಿಣಾಮವಾಗಿ, ಸಾಮಾಜಿಕ ಉಪೇಕ್ಷೆಗೆ ಗುರಿಯಾಗಿ ರಾಷ್ಟ್ರೀಯ ಮುಖ್ಯವಾಹಿನಿಯಿಂದ ದೂರವಾಗಿರುವ ದೇಶಬಾಂಧವರನ್ನು ಸಂಘಟಿಸಿ, ರಾಷ್ಟ್ರನಿರ್ಮಾಣದ ಪ್ರಕ್ರಿಯೆಯಲ್ಲಿ ಸಕ್ರಿಯ ಪಾಲುದಾರಿಕೆಯನ್ನು ಸುನಿಶ್ಚಿತಗೊಳಿಸಿ, ಸಕ್ಷಮ ಭಾರತ ನಿರ್ಮಾಣದ ಧ್ಯೇಯಕ್ಕಾಗಿ ಕಾರ್ಯೋನ್ಮುಖವಾಗಿದೆ.

### ಧ್ಯೇಯೋದ್ದೇಶ

ಪ್ರತಿಜೀವಾತ್ಮವು ಪರಿಪೂರ್ಣ ಮತ್ತು ಸಾಮರ್ಥ್ಯಪೂರ್ಣ ಎಂಬುದು ಸಕ್ಷಮದ ದೃಢ ನಂಬಿಕೆ. ಶಾರೀರಿಕ ಮತ್ತು ಬೌದ್ಧಿಕ ಸವಾಲುಳ್ಳ ರಾಷ್ಟ್ರಬಂಧುಗಳ ಏಕೀಕರಣ, ಸಾಮಾಜೀಕರಣ, ರಾಷ್ಟ್ರೀಕರಣ, ಸಕ್ಷಮದ ಮೂಲ ಧ್ಯೇಯೋದ್ದೇಶವಾಗಿದೆ.

ಶಾರೀರಕ ಮತ್ತು ಬೌದ್ಧಿಕ ಸವಾಲುಳ್ಳವರಲ್ಲಿ ಆತ್ಮಭಿಮಾನ ಮತ್ತು ರಾಷ್ಟ್ರಾಭಿಮಾನ ಜಾಗೃತಗೊಳಿಸಿ, ಅವರ ಆಧ್ಯಾತ್ಮಿಕ, ಸಾಮಾಜಿಕ ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಸಾಧಿಸುವ ಹಂಬಲ ಹೊಂದಿದೆ.

‘ಧ್ಯೇಯೋದ್ದೇಶ ಪೂರ್ತಿಗಾಗಿ ಸಕ್ಷಮವು ವಿವಿಧ ಸಂಘಟನಾತ್ಮಕ ಮತ್ತು ರಚನಾತ್ಮಕ ನೆಲೆಗಳಲ್ಲಿ ಪ್ರಯತ್ನಶೀಲವಾಗಿದೆ.

ಶಿಕ್ಷಣ : ಶಾರೀರಕ ಮತ್ತು ಬೌದ್ಧಿಕ ಸವಾಲುಳ್ಳವರ ಶೈಕ್ಷಣಿಕ ವಿಕಾಸಕ್ಕಾಗಿ ಸಕ್ಷಮವು ರಾಷ್ಟ್ರದ ವಿವಿಧರಾಜ್ಯಗಳಲ್ಲಿ ಶಿಕ್ಷಣಕೇಂದ್ರಗಳು ವಿದ್ಯಾರ್ಥಿನಿಲಯಗಳು, ಧ್ವನಿಪುಸ್ತಕ ತಯಾರಿಕಾ ಘಟಕಗಳು ಬ್ರೈಲ್ ಪುಸ್ತಕ ಮುದ್ರಣ ಕೇಂದ್ರಗಳು, ಕಂಪ್ಯೂಟರ್ ಮತ್ತು ಉದ್ಯೋಗ ತರಬೇತಿ ಕೇಂದ್ರಗಳನ್ನು ನಡೆಸುತ್ತಿದೆ.

ಆರೋಗ್ಯ : ಸಕ್ಷಮವು ಆರೋಗ್ಯ ಕ್ಷೇತ್ರದಲ್ಲಿಯೂ ಅಗ್ರಸರವಾಗಿದ್ದು ಸಾಮಾಜಿಕ ಆರೋಗ್ಯ ಸಂರಕ್ಷಣೆಗೆ ಅನೇಕ ಪ್ರಕಲ್ಪಗಳನ್ನು ಮತ್ತು ಕಾರ್ಯಕ್ರಮಗಳನ್ನು ಸಂಚಾಲಿಸುತ್ತಿದೆ. ಕಣ್ಣುಗಳು ರಾಷ್ಟ್ರೀಯ ಸಂಪತ್ತು ಎಂದು ಘೋಷಿತವಾಗಬೇಕು. ನೇತ್ರದಾನ ರಾಷ್ಟ್ರೀಯ ಪರಂಪರೆಯಾಗಬೇಕು ಎಂಬ ಸಕ್ಷಮದ ರಾಷ್ಟ್ರೀಯ ಬೇಡಿಕೆಗೆ ಪೂರಕವಾಗಿ ಸಕ್ಷಮವು ದೇಶಾದ್ಯಂತ 31ಕ್ಕೂ ಅಧಿಕ ನೇತ್ರಬ್ಯಾಂಕ್ ಮತ್ತು ಕಾರ್ನಿಯ ಸಂಗ್ರಹಣ ಕೇಂದ್ರಗಳನ್ನು ನಡೆಸುತ್ತಿದೆ.

ಅಲ್ಪದೃಷ್ಟಿ ವಿಕಸನ ಕೇಂದ್ರ, ನೇತ್ರದಾನ ಮಾಹಿತಿ ಕೇಂದ್ರ, ಉಚಿತ ನೇತ್ರ ತಪಾಸಣಾ ಶಿಬಿರಗಳ ಆಯೋಜನೆ ಶಾರೀರಿಕ ಮತ್ತು ಬೌದ್ಧಿಕ ಸವಾಲುಳ್ಳವರಿಗೆ ಉಚಿತ ಆರೋಗ್ಯ ತಪಾಸಣೆ ಮತ್ತು ತರಬೇತಿ ಕಾರ್ಯಕ್ರಮಗಳು ನೇತ್ರದಾನ ಜಾಗೃತಿ ಕಾರ್ಯಕ್ರಮಗಳು, ಜಾತಾ ಮತ್ತು ಯಾತ್ರೆಗಳು ಸಕ್ಷಮದ ಪ್ರಮುಖ ಚಟುವಟಿಕೆಗಳಾಗಿವೆ.

ಸ್ವಾವಲಂಬನೆ : ಶಾರೀರಿಕ ಮತ್ತು ಬೌದ್ಧಿಕ ಸವಾಲುಳ್ಳವರ ಆರ್ಥಿಕ ಸ್ವಾವಲಂಬನೆಯ ಸಂಕಲ್ಪದೊಂದಿಗೆ ಸಕ್ಷಮವು ಕೆಳಕಂಡ ಕಾರ್ಯಕ್ರಮಗಳನ್ನು ಸಂಚಾಲಿಸುತ್ತಿದೆ. ಕೇರಳ, ಉತ್ತರ ಪ್ರದೇಶ ಇತ್ಯಾದಿ ರಾಜ್ಯಗಳಲ್ಲಿ ಆಯುರ್ವೇದ ಔಷಧ ತಯಾರಿಕೆ, ಅಗರಬತ್ತಿ ಮತ್ತು ಸಾಬೂನು ತಯಾರಿಕಾ ಘಟಕಗಳನ್ನು ಪ್ರಾರಂಬಿಸಿದೆ. ಆಸಕ್ತರಿಗೆ ತರಬೇತಿಯನ್ನೂ ನೀಡಲಾಗುತ್ತಿದೆ.

ಕಂಪ್ಯೂಟರ್ ಮತ್ತು ಸಂವಹನ ಕೌಶಲ್ಯ ತರಬೇತಿ ಒದಗಿಸಿ ಉದ್ಯೋಗ ಅವಕಾಶಗಳನ್ನೂ ಒದಗಿಸುತ್ತಿದೆ. "ಸ್ವರ ದೃಷ್ಟಿ" ಎಂಬ ಪ್ರಕಲ್ಪದ ಅಡಿಯಲ್ಲಿ ಸಂಗೀತ ತಂಡಗಳನ್ನು ರಚಿಸಿ ಸಂಗೀತ ಕಾರ್ಯಕ್ರಮದ ಮೂಲಕ ಆರ್ಥಿಕ ಸ್ವಾವಲಂಬನೆಗೆ ಅನುವು ಮಾಡಿದೆ.

"ಸಾಮಾಜಿಕ ವಿಕಾಸ"

ಸಕ್ಷಮ ವು ಶಾರೀರಿಕ ಮತ್ತು ಬೌದ್ಧಿಕ ಸವಾಲುಳ್ಳವರ ಸಾಮಾಜಿಕ ವಿಕಾಸಕ್ಕಾಗಿ ವಿಚಾರ ಸಂಕಿರಣಗಳ ಆಯೋಜನೆ, ಭಜನಾಮಂಡಳಿ ಮತ್ತು ರಾಮಾಯಣ ಕೀರ್ತನ ಮಂಡಳಿಗಳ ರಚನೆ, ವಿವಾಹ ಕೇಂದ್ರಗಳ ನಿರ್ವಹಣೆ ಮತ್ತು ಕ್ರೀಡಾ ಮತ್ತು ಮನರಂಜನಾ ಕೇಂದ್ರಗಳನ್ನು ದೆಹಲಿ, ಮಹಾರಾಷ್ಟ್ರ, ಉತ್ತರ ಪ್ರದೇಶ ಮುಂತಾದ ರಾಜ್ಯಗಳಲ್ಲಿ ಸಂಚಾಲಿಸುತ್ತಿದೆ.

ವಾರ್ಷಿಕ ಸಾಮಾಜಿಕ ಉತ್ಸವಗಳು :

ಸಾಮಾಜಿಕ ಜಾಗೃತಿ ಮತ್ತು ಶಿಕ್ಷಣಕ್ಕಾಗಿ ಸಕ್ಷಮ ಪ್ರತಿವರ್ಷವೂ ಕೆಳಕಂಡ ಸಾಮಾಜಿಕ ಉತ್ಸವಗಳನ್ನು ಆಯೋಜಿಸುತ್ತದೆ.

* ಸೂರದಾಸ ಮತ್ತು ಪುಟ್ಟರಾಜಗವಾಯಿಗಳ ಸಂಸ್ಮರಣೆ
* ವಿಶ್ವ ಪರಿಸರ ದಿನ
* ಸಕ್ಷಮ ಸ್ಥಾಪನಾ ದಿನ
* ಹೆಲನ್‌ಕೆಲ್ಲರ್ ಜನ್ಮ ದಿನಾಚರಣೆ
* ರಕ್ಷಾಬಂಧನ
* ನೇತ್ರದಾನ ಪಾಕ್ಷಿಕ
* ವಿಶ್ವ ಅಂಗವಿಕಲರ ದಿನ ಇತ್ಯಾದಿ

## ಆಂದೋಲನಾತ್ಮಕ ಕಾರ್ಯಕ್ರಮಗಳು

ಸಕ್ಷಮ ಕೆಳಕಂಡ ಬೇಡಿಕೆಗಳ ಪೂರೈಕೆಗಾಗಿ ಆಂದೋಲನಾತ್ಮಕ ಚಟುವಟಿಕೆಗಳನ್ನು ನಡೆಸುತ್ತಿದೆ.

* ಕಣ್ಣು ರಾಷ್ಟ್ರೀಯ ಆಸ್ತಿ ಎಂದು ಘೋಷಿತವಾಗಬೇಕು.
* ನೇತ್ರದಾನ ರಾಷ್ಟ್ರೀಯ ಪರಂಪರೆಯಾಗಬೇಕು
* ಲೋಕಸಭೆ ಮತ್ತು ರಾಜ್ಯವಿಧಾನಸಭೆಗಳಲ್ಲಿ ವಿಶೇಷ ಚೇತನರಿಗೆ ಸೂಕ್ತ ಪ್ರಾತಿನಿಧ್ಯ ನೀಡಬೇಕು.
* ಅಂಗವಿಕಲ ಸರ್ಕಾರಿಹುದ್ದೆಗಳನ್ನು ಅಂಗವಿಕಲರಿಗೇ ಕಾಯ್ದಿರಿಸಬೇಕು.
* 1995ರ ಅಂಗವಿಕಲರ ಅಧಿನಿಯಮದ ಸುಧಾರಣೆ ಮತ್ತು ಸಮರ್ಪಕ ಅನುಷ್ಠಾನಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾರ್ಯಶೀಲವಾಗಬೇಕು. ಸಕ್ಷಮ ಕರ್ನಾಟಕ ವಿಭಾಗವು 2010ನೇ ಸಾಲಿನಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ರಾಜ್ಯದ ವಿವಿಧ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಕ್ರಿಯಾಶೀಲವಾಗಿದೆ.

ಸಕ್ಷಮ ಕರ್ನಾಟಕ ವಿಭಾಗವು ರಾಜ್ಯದಲ್ಲಿ ಶಾರೀರಿಕ ಮತ್ತು ಬೌದ್ಧಿಕ ಸವಾಲುಳ್ಳವರ ವಿಕಾಸಕ್ಕಾಗಿ ರಚನಾತ್ಮಕ ಸಂಘಟನಾತ್ಮಕ ನೆಲೆಗಳಲ್ಲಿ ಕಾರ್ಯತತ್ಪರವಾಗಿದ್ದು ಈ ಕೆಳಕಂಡ ಪ್ರಕಲ್ಪಗಳನ್ನು ಪ್ರಾರಂಭಿಸಲು ಉತ್ಸುಕವಾಗಿದೆ.

* ನೇತ್ರ ಬ್ಯಾಂಕ್ ಕಾರ್ನಿಯಾ ಸಂಗ್ರಹಣಾ ಕೇಂದ್ರ
* ಕರ್ನಾಟಕ ವಿವಿಧ ನಗರಗಳಲ್ಲಿ ಉಚಿತ ವಿದ್ಯಾರ್ಥಿನಿಲಯಗಳ ಸ್ಥಾಪನೆ
* ಡಿಜಿಟಲ್ ಮತ್ತು ಇ-ಗ್ರಂಥಾಲಯ ಸ್ಥಾಪನೆ
* ವಿಶೇಷ ಚೇತನರಿಗೆ ಮನರಂಜನೆ ಮತ್ತು ಕ್ರೀಡಾ ಕೇಂದ್ರ
* ಕಂಪ್ಯೂಟರ್ ಮತ್ತು ಕೌಶಲ್ಯ ವಿಕಾಸ ಕೇಂದ್ರ
* ಸಂಗೀತ ಮತ್ತು ಕಲಾ ತರಬೇತಿ ಕೇಂದ್ರ ಮತ್ತು ಮೇಳಗಳು
* ಆಪ್ತ ಸಮಾಲೋಚನೆ ಮತ್ತು ಉದ್ಯೋಗ ಮಾರ್ಗದರ್ಶನ ಕೇಂದ್ರ

ನಿಮ್ಮ ಸಹಕಾರ ಹೇಗೆ?

ಸಕ್ಷಮ ಭಾರತ ನಿರ್ಮಾಣದ, ಸಕ್ಷಮದ ಸಾಮಾಜಿಕ ಪ್ರಯತ್ನದಲ್ಲಿ ನಿಮ್ಮ ಸಹಕಾರ ಅತ್ಯಗತ್ಯವಾಗಿದ್ದು ಕೆಳಕಂಡ ರೀತಿಗಳಲ್ಲಿ ಸಹಕಾರ ಅಪೇಕ್ಷಿಸುತ್ತೇವೆ.

* ಸಕ್ಷಮ ಸಕ್ರಿಯ ಸದಸ್ಯರಾಗಿರಿ
* ಉದಾರ ಧನಸಹಾಯ ನೀಡಿರಿ
* ಸಕ್ಷಮದ ವಿವಿಧ ಪ್ರಕಲ್ಪ ಮತ್ತು ಯೋಜನೆಗಳನ್ನು ತನು-ಮನ-ಧನಗಳಿಂದ ಬೆಂಬಲಿಸಿರಿ
* ನೇತ್ರದಾನ ಸಂಕಲ್ಪ ಮಾಡಿರಿ
* ಸಕ್ಷಮದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಿ

**ಸಕ್ಷಮ**
**ಕರ್ನಾಟಕ ಘಟಕ**
**ನಂ.55, ಯಾದವಸ್ಮೃತಿ, ಲಿಂಕ್‌ರಸ್ತೆ,**
**ಶೇಷಾದ್ರಿಪುರಂ, ಬೆಂಗಳೂರು-560020**

Website : www.sakshama_karnataka.org
Email : sakshama.karnataka@gmail.com
sakshama_karnataka@facebook.com

**ಸಂಪರ್ಕ ದೂರವಾಣಿ**
**9986699710, 7026602762**
**9164881858, 8123753589, 9740895869**